
ಮಾರಪ್ಪ ಜವಳಿಯಂಡಿಯತ್ತ ಹೆಜ್ಜೆ ಹಾಕಿದ. ಸೀರೆಯೊಂದರ ಮೇಲೆ ರೂ. 99 ಎಂದು ಚೀಟಿ ಅಂಟಿಸಿತ್ತು. ಪಕ್ಕದ ಸೀರೆಗೆ ರೂ. 199 ಎಂಬ ಚೀಟಿ. ಇದೇಕಿಷ್ಟು ಎಂದು ಕೇಳಿದ. ಧೂಳು ಹೊಡೆಯುತ್ತಿದ್ದ ಹುಡುಗ 'ವಿತ್ ಬ್ಲೌಸ್‌ಪೀಸ್' ಅಂದ. 'ಗೊತ್ತಾಗಲಿಲ್ಲ' ಅಂದ ಮಾರಪ್ಪ. 'ಅಂದ್ರೆ ರವಿಕೆ ಬಟ್ಟೇನೂ ಇದೆ' ಅಂದಾಗ, 'ನೂರಕ್ಕೆ ಕೊಡೋಲ್ವ' ಅಂದ. ಕೂತಲ್ಲಿಂದಲೇ ಮಾಲಿಕ 'ಫಿಕ್ಸೆಡ್ ರೇಟ್ ಯಜಮಾನ' ಅಂದ. ನೂರರ ನೋಟಿನೊಂದಿಗೆ ಹತ್ತರ ಎರಡುನೋಟುಗಳನ್ನು ಕೊಟ್ಟ. ಅಂಗಡಿಯವನು ಒಂದು ರೂಪಾಯಿ ಚಿಲ್ಲರೆ ಇಲ್ಲವೆಂದ. 'ಹಾಗಿದ್ದ ಮೇಲೆ ನೂರಹತ್ತು ಹಿಡಿದುಕೊಂಡು ಹತ್ತು ರೂಪಾಯಿ ಹಿಂದಕ್ಕೆ ಕೊಡು' ಅಂದ. 'ನನಗೆ ಲುಕ್ಸಾನು ಅಗುತ್ತೆ' ಅಂದ ಅಂಗಡಿಯವನು ಒಪ್ಪಲಿಲ್ಲ. 'ನೂರ ಹತ್ತೊಂಬತ್ತು ಎಂದು ಚೀಟಿ ಹಾಕಿದ್ದೇಕೆ? ಹಾಕಿದ ಮೇಲೆ ಚಿಲ್ಲರೆ ಇಟ್ಟುಕೊಳ್ಳಬೇಕಿತ್ತು' ಎಂದು ವಾದಿಸಿದ. ಕಡೆಗೆ ಅಂಗಡಿಯವನು ಗಲ್ಲಾಪೆಟ್ಟಿಗೆಯಲ್ಲಿ ಹುಡುಕಿ ಹುಡುಕಿ ನೋಟೊಂದರ ಮಧ್ಯೆ ಸೇರಿಕೊಂಡಿದ್ದ ಒಂದು ರೂಪಾಯಿ ಬಿಲ್ಲೆಯನ್ನು ತೆಗೆದು ಕೊಟ್ಟ. ಚಿಲ್ಲರೆ ಇಟ್ಟುಕೊಂಡೂ ಹೀಗೆ ಮಾಡುವುದು ಒಳ್ಳೇ ವ್ಯಾಪಾರದ ಲಕ್ಷಣವಲ್ಲವೆಂದ ಮಾತಿಗೆ ಅಂಗಡಿಯವನು ಏನೋ ಹೇಳಲು ಹೋಗಿ ಸುಮ್ಮನಾದ.

ಮನೆಗೆ ಬರುತ್ತ, ಸೀರೇನ ಅವಳ ಮುಖದ ಮೇಲೆ ಎಸೆಯಬೇಕು ಅಂದುಕೊಂಡ. ತೀರಾ ಮನೆಗೆ ಬಂದ ಮೇಲೆ, ಶಾಂತನಾಗಿ ಸೀರೆಯನ್ನು ಹೆಂಡತಿಯ ಕೈಗಿತ್ತ. ಸೀರೆಯ ಮಡಿಕೆಯನ್ನು ಬಿಚ್ಚಿ, ಹೆಗಲಿನ ಮೇಲೆ ಹಾಕಿಕೊಂಡು ನೇವರಿಸುತ್ತ, 'ತುಂಬಾ ಚೆನ್ನಾಗಿದೆ. ದುಡ್ಡು ಎಲ್ಲಿತ್ತು' ಅಂದಳು. ಹೀಗೀಗಾಯ್ತು ಅಂದ. 'ಹೊಟ್ಟೆಸಂಕಟದಲ್ಲಿ ಒಂದು ಮಾತಾಡಿದೆ ಅಂತ...' ಕಣ್ಣೀರೊರೆಸಿಕೊಂಡಳು. 'ಆಯ್ತಲ್ಲ ಬಿಡು' ಅಂದು, ಕಿಸೆಯಲ್ಲಿದ್ದ ಇಪ್ಪತ್ತನಾಲ್ಕು ರೂಪಾಯಿ ಐವತ್ತು ಪೈಸೆಯಲ್ಲಿ, ಹದಿನೈದು ರೂಪಾಯಿಗಳನ್ನು ಮಡದಿಗೆ ಕೊಟ್ಟು, ಬೀಡಿ ಖರ್ಚಿಗಾಗಿ ಒಂಬತ್ತು ರೂಪಾಯಿ ಐವತ್ತು ಪೈಸೆಯನ್ನು ಜೇಬಿನಲ್ಲಿಟ್ಟುಕೊಂಡ.

ಗಂಡ ಬೆಳಿಗ್ಗೆ ತಂಗಳುಂಡಿದ್ದಷ್ಟೆ. ಆಮೇಲೆ ಕೈ ಎಂಜಲು ಮಾಡಿರಲಿಲ್ಲ. ಕರುಳು ಚುರ್ ಎಂದಿತು. ಇದು ಊಟದ ಹೊತ್ತೂ ಅಲ್ಲವೆಂದುಕೊಂಡು, ಒಲೆಯ ಮೇಲಿನ ಮಡಕೆಯಲ್ಲಿ ಕಾದು ಆರಿದ ಹಾಲಿನಿಂದೊಂದು ಲೋಟ ಹಾಲಿಗೆ ಬೆಲ್ಲ ಹಾಕಿ ತಂದು ಕೊಟ್ಟಳು.

ಮಲಗುವ ಮುಂಚೆ ಕಣ್ಣೆಳೆಯುತ್ತಿದ್ದ ನಿದ್ದೆ, ಮಲಗಿದಾಗ ಹತ್ತಿರ ಸುಳಿಯಲಿಲ್ಲ. 'ಹಾಗಾದರೆ ಜಮೀನು ಹೋಗುತ್ತೇನು? ಹಾಗೆ ಆದರೆ ನಮ್ಮ ಗತಿಯೇನು?' ಎಂದು ಆತಂಕದಿಂದ ಕೇಳಿದಳು. 'ಹೋಗುತ್ತೆ ಅಂತಲೂ ಹೇಳಲಾಗದು; ಉಳಿಯುತ್ತೆ ಅಂತಲೂ ನಂಬಲಾಗದು. ಮಳೆ ಬರುತ್ತೆ ಅನ್ನಿಸುತ್ತೆ. ಆದರೆ ಬರುವುದಿಲ್ಲ. ಬರದು ಅಂದುಕೊಂಡಾಗ ಬಂದೇಬಿಡುತ್ತೆ. ಇದೂ ಹಾಗೆಯೇ. ಎಲ್ಲ ಅಯೋಮಯ' ಅಂದ. 'ಹೋರಾಟ ಅಂತಿದ್ದಾರಲ್ಲ, ಹೇಗದು?'



ಎಂದು ಕೇಳಿದಳು. 'ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಹೋರಾಡಿದ್ದನ್ನು ಸ್ಕೂಲಿನಲ್ಲಿ ಓದಿದ್ದಿಲ್ವ, ಹಾಗೆ' ಅಂದ. 'ನಾನೆಲ್ಲಿ ಸ್ಕೂಲಿಗೆ ಹೋಗಿದ್ದೀನಿ ತಿಳಿಯೋಕೆ' ಅಂದಳು. 'ಹೋರಾಟ ಅಂದರೆ ನಮ್ಮಂತೋರು ಒಂದು ಕಡೆ ಸೇರೋದು, ಭೂಮಿ ಕೊಡಲ್ಲ ಅಂತ ಹಠಹಿಡಿದು ಕೂರೋದು' ಎಂದು ತನಗೆ ತಿಳಿದ ಹಾಗೆ ಹೇಳಿದ. 'ಅವರಿಗೆ ಬೇಸಾಯದ ನೆಲಾನೇ ಆಗಬೇಕೇನು? ಎಷ್ಟೊಂದು ಬಂಜರು ಭೂಮಿ ಇದೆ. ಅದೇನು ಮಾಡಬೇಕಂತಿದ್ದಾರೋ ಅದನ್ನ ಅಲ್ಲೇ ಮಾಡಬೋದಲ್ಲ? ನಮ್ಮ ಬದುಕಿನ ಮೇಲೇಕೆ ಹೊಡೆಯೋದು' ಅಂದಳು. 'ಮಾಡಬೋದು ಅಂತ ನಾವನ್ನಬೋದು. ಅವರಿಗೆ ಅನ್ನಿಸಬೇಕಲ್ಲ? ಅನ್ನಿಸಿದರೆ ನಮಗೇಕೆ ಈ ಚಿಂತೆ ಇರುತ್ತಿತ್ತು? ಓಟು ಹಾಕೋವರಿಗಷ್ಟೆ ನಮ್ಮಂಥ ಜನಕ್ಕೆ ತಿಳಿಯೊ ರಾಜಕೀಯ. ಆ ಮೇಲಿನದು ನಮಗೆ ತಿಳಿಯೋದಲ್ಲ ಹೆಣ್ಣೆ' ಅಂದು ನಿಟ್ಟುಸಿರಿಟ್ಟ. ಅದಕ್ಕೆ ರಾಮುಲಮ್ಮ ತನ್ನ ನಿಟ್ಟುಸಿರನ್ನು ಕೂಡಿಸಿದಳು.

ಬೆಳಗಾಗುತ್ತಲೇ ಮಾರಪ್ಪ ತೋಟಕ್ಕೆ ಹೋದ. ನಿನ್ನೆ ಗುಡ್ಡೆ ಹಾಕಿದ್ದ ಕೊಳತ ಈರುಳ್ಳಿ ರಾಶಿಯ ಗಬ್ಬುನಾತ ಸಹಿಸುವಂತಿರಲಿಲ್ಲ. ಗೊಬ್ಬರವಾದರೂ ಆಗಲಿ ಅಂದುಕೊಂಡು, ಮೊಳಕೆಗಟ್ಟಿ ಮೆತ್ತಗಾಗಿದ್ದವನ್ನೂ ಕೊಳೆತ ರಾಶಿಯ ಮೇಲೆ ಹಾಕಿ, ಸನಿಕೆಯಿಂದ ಮಣ್ಣು ಎತ್ತಿ ಹಾಕಿ ಮುಚ್ಚಿದ. ಮನಸ್ಸು ನಿರುಮ್ಮಳವಾಯಿತು. ಆದರೆ ಗಾಳಿ ಬೀಸಿದಾಗ ಅದರ ವಾಸನೆ ಮಣ್ಣಿನೊಳಗಿಂದಲೇ ಹೊರಡುತ್ತಿತ್ತು.

ಇದಕ್ಕೂ ಹೆಚ್ಚು ಕೆಲಸ ಮಾಡಿದಾಗಲೂ ದಣಿದವನಲ್ಲ. ಇಂದು ವಿಪರೀತ ಆಯಾಸ. ಮಲಗಬೇಕೆನಿತು. ತಲೆಗೆ ಸುತ್ತಿಕೊಂಡಿದ್ದ ಟವಲನ್ನು ಬಿಚ್ಚಿ ಹುಣಿಸೆಮರದಡಿ ಹಾಸಿ ಮಲಗಿದ. ಹೋರಾಟದಲ್ಲೇನಾದರೂ ಸೋತರೆ ಮುಂದಿನ ಅಥವಾ ಅದರ ಮುಂದಿನ ಬೆಳೆಯವರೆಗಷ್ಟೇ ಭೂಮಿ ತನ್ನದು. ಆಮೇಲೆ ಯಾರದೊ ಅನಿಸಿದಾಗ, ಮಲಗಿರಲಾಗದೆ ಎದ್ದು ಕುಳಿತ.

ಪ್ರತಿಕ್ರಿಯಿಸಿ: feedback@sudha.co.in